**ಎಸ್ ಸಿ -5100 /2022**

ಪಿಡಬ್ಲುಃ 9, ಸಿಡಬ್ಲುಃ 70/ ಸಿಡಬ್ಲು-100

**1ನೇ ಅಧಿಕ ಜಿಲ್ಲಾ ವ ಸತ್ರ ನ್ಯಾಯಾಧೀಶರು , ಧಾರವಾಡ ಮೊಕ್ಕಾಂ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.**

ಸಾಕ್ಷಿದಾರರ ಹೆಸರು : ಸಂತೋಷ ತಂದೆಃ ರೇವಣಸಿದ್ದಪ್ಪ ಕರಡೇರಾ

ವಯಸ್ಸು : 42 ವರ್ಷ

ಉದ್ಯೋಗ : **ಸೆಕ್ಯೂರಿಟಿ ಆಫಿಸರ್, ಪ್ರೆಸಿಡೆಂಟ್ ಹೊಟೇಲು**

ವಾಸಸ್ಥಳ : ಹುಬ್ಬಳ್ಳಿ

(ದಿನಾಂಕ 18.02.2026 ರಂದು ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದ**

ನಾನು 2014 ರಿಂದ ಹುಬ್ಬಳ್ಳಿಯ ಪ್ರೆಸಿಡೆಂಟ್ ಹೊಟೇಲಿನಲ್ಲಿ Security Officer ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಪ್ರೆಸಿಡೆಂಟ್ ಹೊಟೇಲಿನ ಸಿಸಿ ಟಿ ವಿ ಕ್ಯಾಮರಾಗಳನ್ನು ನಿರ್ವಹಿಸುತ್ತೇನೆ. ನಾನು ದ್ವಿತಿಯ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. computer Basic ತರಭೇತಿ ಪಡೆದಿದ್ದೇನೆ.

2. ಪ್ರೆಸಿಡೆಂಟ್ ಹೊಟೇಲಿನಲ್ಲಿ ಹಿಕ್ ವಿಜನ್ ಕಂಪೆನಿಯ ಸಿಸಿ ಕ್ಯಾಮರಾಗಳನ್ನು ಮತ್ತು ಡಿವಿ ಆರ್ ನ್ನು ಅಳವಡಿಸಲಾಗಿದೆ. ಸಿಸಿ ಕ್ಯಾಮರಾಗಳು ಸುಮಾರು 1 ತಿಂಗಳು ದೃಶ್ಯಾವಳಿಗಳನ್ನು storage ಮಾಡಿಕೊಳ್ಳುತ್ತವೆ.

3. ದಿಃ 17-07-2022 ರಂದು ಮಧ್ಯಾಹ್ನ 4-00 ಗಂಟೆಗೆ ಎಸಿಪಿ ಮುಕ್ತೆದಾರ, ತುಳಸಿರಾಜ, ಸಂತೋಷ ಮತ್ತು ಪರಸಾಪುರ ರವರು ನಮ್ಮ ಹೊಟೇಲಿಗೆ ಬಂದಿದ್ದರು. ಆ ರೀತಿ ಬಂದವರು ಹೊಟೇಲಿನ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಸಬೇಕು ಎಂದು ಕೇಳಿದರು. ಹೊಟೇಲಿನ ಲಾಬಿ ಪಕ್ಕದಲ್ಲಿ Server room ಇದ್ದು ನಾನು ಅವರನ್ನು ಅಲ್ಲಿಗೆ ಕರೆದುಕೊಂಡು ಹೋದೆನು.

4. ತನಿಖಾಧಿಕಾರಿಗಳು ನನಗೆ ದಿಃ 04.07.2022, ದಿಃ 05.07.2022 ರ ದೃಶ್ಯಾವಳಿಗಳನ್ನು ಪರಿಶೀಲಿಸಬೇಕು ಎಂದು ಹೇಳಿದರು. ಕ್ಯಾಮರಾದ ದೃಶ್ಯಾವಳಿಗಳನ್ನು ತೋರಿಸಲು ಕೇಳಿದಾಗ, ನಾನು ಯಾವ ಸಮಯದ್ದು ಎಂದು ಕೇಳಿ ತಿಳಿದುಕೊಂಡು ನಂತರ ದಿಃ 04-07-2022 ರ ಬೆಳಿಗ್ಗೆ 10-30 ಸಮಯದಿಂದ ಮಧ್ಯಾಹ್ನ 12-30 ರವರೆಗಿನ ದೃಶ್ಯಾವಳಿಗಳನ್ನು ತೋರಿಸಿದೆನು. ದಿಃ 05-07-2022 ರ ಮಧ್ಯಾಹ್ನ 12-15 ರಿಂದ 12-35 ರವರೆಗಿನ ದೃಶ್ಯಾವಳಿಗಳನ್ನು ತೋರಿಸಿದೆನು.

5. ಸದರಿ ದೃಶ್ಯಾವಳಿಗಳನ್ನು Pendrive ಗೆ ಹಾಕಿಕೊಡುವಂತೆ ತನಿಖಾಧಿಕಾರಿಗಳು ಕೇಳಿದರು. ಎರಡು ದಿನದ ದೃಶ್ಯಾವಳಿಗಳನ್ನು ಡಿವಿಆರ್ ನಿಂದ copy paste ಮಾಡಿ, Pendrive ನಲ್ಲಿ ಮೂರು folder ಮಾಡಿ ಹಾಕಿದೆನು. 1 ನೇ folder ಗೆ, Lobby counter ಎಂದು ಹೆಸರು ಕೊಟ್ಟು, 2 ನೇ folder ಗೆ, Lobby counter ಎಂದು ಹೆಸರು ಕೊಟ್ಟು, 3 ನೇ folder ಗೆ, Main gate ಎಂದು ಹೆಸರು ಕೊಟ್ಟು ದೃಶ್ಯಾವಳಿಗಳನ್ನು ಹಾಕಿದೆನು. ಈ ಬಗ್ಗೆ ಪೋಲಿಸರು ಪಂಚನಾಮೆ ಮಾಡಿಕೊಂಡರು, ಫೋಟೋ ತೆಗೆದರು. ಪರಸಾಪುರ ಎನ್ನುವವರು ಅವರೊಂದಿಗೆ Laptop ತಂದಿದ್ದರು. ನಾನು ಕೊಟ್ಟ Pendrive ಅನ್ನು ಆ Laptop ಗೆ ಹಾಕಿ ಅವರು ಚೆಕ್ ಮಾಡಿಕೊಂಡರು. ನಾನು DVR ನಿಂದ Pendrive ಗೆ ಹಾಕಿಕೊಟ್ಟ ದೃಶ್ಯಾವಳಿಗಳು ಮತ್ತು Laptop ನಲ್ಲಿ ನೋಡಿದ ದೃಶ್ಯಾವಳಿಗಳು ಒಂದೆ ಆಗಿದ್ದವು.

6. ನಂತರ Pendrive ಅನ್ನು Laptop ನಿಂದ ತೆಗೆದು Brown colour ಕವರಿಗೆ ಹಾಕಿ ಸೀಲು ಮಾಡಿ ಸಹಿಗಳನ್ನು ಪಡೆದರು. ಅಲ್ಲಿ ಬಂದಿದ್ದ ಪಂಚರ ಸಹಿಗಳನ್ನು ಪಡೆದರು. ಸದರಿ ಪಂಚನಾಮೆಯನ್ನು ಸಂಜೆ 4-00 ರಿಂದ ರಾತ್ರಿ 7-30 ವರೆಗೆ ಮಾಡಿದರು. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ.

7. ನಿಪಿ-45 ಮಹಜರನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ **ನಿಪಿ-45(ಬಿ)** ಎಂದು ಗುರುತಿಸಲಾಯಿತು. ನಿಪಿ-46 ರಿಂದ ನಿಪಿ-50 ಫೋಟೋಗಳನ್ನು ನೋಡಿ ತನ್ನ ಇರುವಿಕೆಯನ್ನು ಸಾಕ್ಷಿಯು ಗುರುತಿಸಿ ಮಹಜರ ಕಾಲಕ್ಕೆ ತೆಗೆದ ಫೋಟೋಗಳು ಎಂದು ನುಡಿದಿದ್ದಾರೆ. Pendrive ಅನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-43 Pendrive ಅನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಗುರುತಿಸಿದ್ದಾರೆ. ನಿಪಿ-43 ರ contents ಅನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ಗುರುತಿಸಿದ್ದಾರೆ.

8. ನಿಪಿ-43 ರ 2 ನೇ folder ನಲ್ಲಿದೃಶ್ಯಾವಳಿಗಳಲ್ಲಿ ಸಮಯ 12-08 ರಿಂದ 12-24 ವರೆಗೆ ಭಕ್ತಿ, ಸಂದೇಶ, ಲೋಹಿತ, ಅಖಿಲೇಶ, ಶಾನವಾಜ ರವರನ್ನು ಗುರುತಿಸಿದ್ದಾರೆ. ಅವರೊಂದಿಗೆ ಬೇರೆ ಇತರೆ ಹೊಟೇಲಿನ ಸಿಬ್ಬಂದಿಗಳು ಸಹ ಕಾಣಿಸುತ್ತಿದ್ದಾರೆ.

9. ನಿಪಿ-43 ರ 1 ನೇ folder ನಲ್ಲಿದೃಶ್ಯಾವಳಿಗಳಲ್ಲಿ ಸಮಯ 10-28 ರಿಂದ 12-37 ವರೆಗೆ ಶಾನವಾಜ, ನಿಕಿತಾ, ಅಖಿಲೇಶ ಮತ್ತು ಲೋಹಿತ ರವರನ್ನು ಗುರುತಿಸಿದ್ದಾರೆ.

10. ದಿಃ 17-07-2022 ರಂದು ತನಿಖಾಧಿಕಾರಿಗಳು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

11. ದಿಃ 17-07-2022 ರಂದು ನಾನು ತನಿಖಾಧಿಕಾರಿಗಳಿಗೆ ದೃಶ್ಯಾವಳಿಗಳನ್ನು ಯಥಾ ಸ್ಥಿತಿಯಲ್ಲಿ Pendrive ಗೆ ಹಾಕಿಕೊಟ್ಟಿದ್ದೇನೆ ಎಂದು ಧೃಡಿಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ಧೃಡಿಕರಣ ಪತ್ರ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದಕಾರಣ **ನಿಪಿ-55** ಎಂದು ಮತ್ತು ಸಾಕ್ಷಿಯ ಸಹಿಯನ್ನು **ನಿಪಿ-55(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಆರ್ ಜಿ ಕೆ ವಕೀಲರಿಂದಃ**

12. ನಾನು ದ್ವಿತಿಯ ಪಿಯುಸಿಯನ್ನು ಕಲಾ ವಿಭಾಗದಲ್ಲಿ ಮಾಡಿರುತ್ತೇನೆ. ನಾನು Computer Basic ತರಭೇತಿಯನ್ನು ಬೆಂಗಳೂರಿನಲ್ಲಿ ಪಡೆದಿರುತ್ತೇನೆ. ಆ ಬಗ್ಗೆ ನನಗೆ ಧೃಡಿಕರಣ ಪತ್ರವನ್ನು ನೀಡಿದ್ದಾರೆ. ಸದರಿ ಧೃಡಿಕರಣ ಪತ್ರವು ಈಗ missplace ಹೋಗಿದೆ. ನಾನು Computer Basic ತರಭೇತಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ, ಸಿಸಿ ಟಿವಿ ದೃಶ್ಯಾವಳಿಗಳಲ್ಲಿ ನಿಕಿತಾ, ಶಾನವಾಜ, ಸಂದೇಶ, ಲೋಹಿತ, ಭಕ್ತಿ ರವರು ಕಾಣಿಸುತ್ತಿದ್ದಾರೆ ಎಂದು ಹೇಳಿರುತ್ತೇನೆ. ಈ ವಿಚಾರವನ್ನು ನಾನು ಪೋಲಿಸರಿಗೆ ನೀಡಿದಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಕಿತಾ, ಶಾನವಾಜ, ಸಂದೇಶ, ಲೋಹಿತ, ಭಕ್ತಿ ರವರು ದೃಶ್ಯಾವಳಿಗಳಲ್ಲಿ ಕಾಣಿಸುತ್ತಿದ್ದಾರೆ ಎಂದು ನಾನು ಪ್ರಥಮ ಬಾರಿಗೆ ಹೇಳಿದ್ದೇನೆ ಹೊರತು ಈ ಹಿಂದೆ ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

13. ನನ್ನನ್ನು ಪ್ರೆಸಿಡೆಂಟ ಹೊಟೇಲಿನ ಕೆಲಸಕ್ಕೆ ಹೇಗೆ ನೇಮಕ ಮಾಡಿದರು ಎಂದರೆ ನಾನು ಬೆಂಗಳೂರಿನಲ್ಲಿ ಅದೇ ಕಂಪೆನಿಯ ಹೊಟೇಲಿನಲ್ಲಿ ಕೆಲಸ ಮಾಡುತ್ತಿದ್ದು ಅಲ್ಲಿಂದ ನನ್ನನ್ನು ಹುಬ್ಬಳ್ಳಿಯ ಹೊಟೆಲಿಗೆ ವರ್ಗಾವಣೆ ಮಾಡಿರುತ್ತಾರೆ. ನಾನು ಸದರಿ ಕಂಪೆನಿಯಲ್ಲಿ 2004 ರಲ್ಲಿ ಕೆಲಸಕ್ಕೆ ನೇಮಕ ಆಗಿರುತ್ತೇನೆ. ನನ್ನನ್ನು ಯಾವ ಕೆಲಸಕ್ಕೆ ನೇಮಕ ಮಾಡಿಕೊಂಡರು ಎಂದರೆ Security Officer ಆಗಿ ಮತ್ತು CCTV Camera Maintenance ಗಾಗಿ ನೇಮಕ ಮಾಡಿಕೊಂಡಿರುತ್ತಾರೆ. ನನ್ನನ್ನು ಕೆಲಸಕ್ಕೆ ನೇಮಕ ಮಾಡಿಕೊಂಡ ಬಗ್ಗೆ ನೇಮಕಾತಿ ಆದೇಶ ಕೊಟ್ಟಿದ್ದರು. ಸದರಿ ಆದೇಶವನ್ನು ನಾನು ತನಿಖಾಧಿಕಾರಿಗಳಿಗೆ ನೀಡಿರುವುದಿಲ್ಲ.

14. ನಾನು ಪ್ರೆಸಿಡೆಂಟ ಹೊಟೆಲಿಗೆ ಕೆಲಸಕ್ಕೆ ಸೇರಿದಾಗ ಅಲ್ಲಿ ನನಗೆ ನೇಮಕಾತಿ ಆದೇಶ ನೀಡಿದ್ದರು. ಸದರಿ ಆದೇಶದಲ್ಲಿ ನನ್ನನ್ನು Security Officer ಆಗಿ ಮತ್ತು CCTV Camera Maintenance ಗಾಗಿ ಎಂದು ನಮೂದು ಮಾಡಿರುತ್ತಾರೆ. ಸದರಿ ದಾಖಲೆಯನ್ನು ನಾನು

ಪೋಲಿಸರಿಗೆ ನೀಡಿರುವುದಿಲ್ಲ. ನಾನು ಪ್ರೆಸಿಡೆಂಟ್ ಹೊಟೇಲಿನಲ್ಲಿ Security Officer ಅಥವಾ CCTV Camera Maintenance ಕೆಲಸವನ್ನು ಮಾಡುತ್ತಿರುವುದಿಲ್ಲ ಎಂದರೆ ಸರಿಯಲ್ಲ.

15. ಸಿಸಿ ಕ್ಯಾಮರಾ ದೃಶ್ಯಾವಳಿಗಳು ಬೇಕು ಎಂದು ತನಿಖಾಧಿಕಾರಿಗಳು ಕೋರಿಕೆಯನ್ನುಹೊಟೇಲಿನ General Manager ರವರಿಗೆ ನೀಡಿದ್ದರು. ಆ ರೀತಿ ಕೋರಿಕೆಗಳು ಹೊಟೇಲಿಗೆ ಬಂದಲ್ಲಿ ಅದನ್ನು ಸಂಗ್ರಹಿಸಿ ಇಡುತ್ತಾರೆ. ಆ ಸಮಯದಲ್ಲಿ ಪ್ರಶಾಂತ ಆಚಾರ್ಯ(ಸಿಡಬ್ಲು-47) ಎಂಬುವವರು General Manager ಆಗಿದ್ದರು. ಚಾಸಾಃ47 ರವರು ಸಿಸಿ ಟಿ ದೃಶ್ಯಾವಳಿಗಳನ್ನು ತೋರಿಸುವಂತೆ ನನಗೆ ಸಂಜೆ 4-00 ಗಂಟೆಗೆ ಹೇಳಿದರು.

16. ಪ್ರೆಸಿಡೆಂಟ್ ಹೋಟೆಲಿನ ಯಾವ ಯಾವ ಸ್ಥಳದಲ್ಲಿ ಸಿಸಿ ಕ್ಯಾಮರಾ ಹಾಕಬೇಕು ಎಂಬ ಬಗ್ಗೆ ನಕಾಶೆ ಇರುತ್ತದೆಯೇ ಎಂದರೆ ಬೆಂಗಳೂರಿನಿಂದ ಸಿಸಿ ಕ್ಯಾಮರಾಗಳನ್ನು ಅಳವಡಿಸಲು ಬೆಂಗಳೂರಿನ ಕಂಪೆನಿಯವರು ಕಳುಹಿಸಿದ್ದರು. ಸಿಸಿ ಕ್ಯಾಮರಾಗಳ ವೈರುಗಳನ್ನು ಗೋಡೆಯ ಒಳಗೆ ಹಾಕಿರುವುದಿಲ್ಲ ಬದಲಿಗೆ ಗೋಡೆಯ ಮೇಲೆ ಪೈಪು ಹಾಕಿ ಪೈನ ಒಳಗಡೆಯಿಂದ ಹಾಕಲಾಗಿರುತ್ತದೆ. ಸಿಸಿ ಕ್ಯಾಮರಾಗಳನ್ನು ಸಂಪರ್ಕಿಸುವ ವೈರುಗಳು ಸುಸ್ಥಿತಿಯಲ್ಲಿ ಇದೆಯೇ ಎಂದು ಪರೀಕ್ಷಿಸುತ್ತೀರಾ ಎಂದರೆ ಸಿಸಿ ಕ್ಯಾಮರಾವನ್ನು ಆಗಾಗ ಪರಿಶೀಲಿಸುತ್ತೇವೆ.

17. ದಿಃ 17.07.2022 ರ ಪೂರ್ವದಲ್ಲಿ ಸದರಿ ವೈರುಗಳನ್ನು ಪರೀಕ್ಷಿಸಲಾಗಿತ್ತೇ ಎಂದರೆ ಪ್ರತಿನಿತ್ಯವು ನಾವು ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಿಸುತ್ತೇವೆ. ದೃಶ್ಯಾವಳಿಗಳು ಕಾಣದೆ ಇದ್ದ ಪಕ್ಷದಲ್ಲಿ, ಕ್ಯಾಮರಾ ಸರಿ ಇದೆಯೇ ಇಥವಾ ಕೇಬಲ ಪ್ರಾಬ್ಲಮ್ ಇದೆಯೇ ಎಂದು ಪರೀಕ್ಷಿಸುತ್ತೇವೆ. ಒಂದು ಪಕ್ಷ ವೈರುಗಳು /ಕೇಬಲ್ ಸರಿ ಇಲ್ಲದೆ ಇದ್ದಾಗ ಅದನ್ನು ಇಂಜಿನಿಯರಿಂಗ್ ಡಿಪಾರ್ಟಮೆಂಟ್ ನವರು ಬಂದು ಪರಿಶೀಲಿಸಿ ಸರಿಪಡಿಸುತ್ತಾರೆ. ಸಿಸಿ ಕ್ಯಾಮರಾದ ವೈರುಗಳನ್ನು ಇಲಿಗಳು ಕಡಿದು ಹಾಕುವ ಸಂದರ್ಭಗಳು ಇರುತ್ತವೆ ಎಂದರೆ ಸರಿ.

18. ಪ್ರೆಸಿಡೆಂಟ್ ಹೊಟೇಲಿನ ಸಿಸಿ ಕ್ಯಾಮರಾದ ನಿರ್ವಹಣೆಯನ್ನುನಾನು ಮಾಡುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-43 Pendrive ನ ದೃಶ್ಯಾವಳಿಗಳನ್ನು Morph ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-43ರ ದೃಶ್ಯಾವಳಿಗಳು ನೈಜ ದೃಶ್ಯಾವಳಿಗಳು ಅಲ್ಲ ಎಂದರೆ ಸರಿಯಲ್ಲ. ದಿಃ 4-07-2022 ಹಾಗೂ 05-07-2022 ರಂದು ಸದರಿ ಹೋಟೇಲಿನಲ್ಲಿ ಗ್ರಾಹಕರು ಇದ್ದರು. ಹೊಟೇಲಿನ ಲಿಫ್ಟಗಳು ಲಾಬಿ ಪ್ರದೇಶದಲ್ಲಿವೆ. ಪ್ರೆಸಿಡೆಂಟ್ ಹೊಟೇಲಿನ ಲಾಬಿಗೆ ಗ್ಲಾಸುಗಳನ್ನು ಅಳವಡಿಸಿದ್ದು ಅವುಗಳ

ಪಾರದರ್ಶಕವಾಗಿವೆ. ರಸ್ತೆಯಿಂದ ಹೊಟೆಲಿನ ಲಾಬಿ ಕಾಣಿಸುತ್ತದೆ ಎಂದರೆ ಸರಿ. ನಿಪಿ-43 ರ ದೃಶ್ಯಾವಳಿಗಳನ್ನು ಸೃಷ್ಟಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸೃಷ್ಟಿ ಮಾಡಿದ ದೃಶ್ಯಾವಳಿಗೆ ಪೂರಕವಾಗುವಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ ಆರ್ ಪಿ ವಕೀಲರಿಂದಃ**

19. ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ನಾನು Security officer ಎಂದು ಮಾತರ ಹೇಳಿದ್ದೇನೆ ಹೊರತು ಸಿಸಿ ಕ್ಯಾಮರಾಗಳನ್ನು ನಿರ್ವಹಿಸುತ್ತೇನೆ ಎಂದು ಹೇಳಿರವುದಿಲ್ಲ ಎಂದರೆ ಸರಿಯಲ್ಲ. ನಾನು ಸಿಸಿ ಕ್ಯಾಮರಾಗಳನ್ನು ನಿರ್ವಹಿಸುತ್ತೇನೆ ಎಂದು ಮೊದಲ ಬಾರಿಗೆ ಹೇಳುತ್ತಿದ್ದೇನೆ ಹೊರತು ಈ ಹಿಂದೆ ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅನುಮೋದಿಸುವುದಾಗಿ ನುಡಿದಿದ್ದಾರೆ.

ಮರುವಿಚಾರಣೆಃ ಇಲ್ಲ.

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಿದೆ }***

**ಸಾ ಓ ಹೇ ಕೇ ಸರಿ ಇದೆ**

(ಪಲ್ಲವಿ ಬಿ ಆರ್)
**1ನೇ ಅಧಿಕ ಸತ್ರ ನ್ಯಾಯಾಧೀಶರು**

**ಹುಬ್ಬಳ್ಳಿ**